

## ದೇವರು ಅಂದ್ರೆ...

ಗೆಳತಿ ಮಂಜುಳಾಳ ತಂಗಿಯ ಐದು ವರ್ಷದ ಮಗ ತುಂಬಾ ಚೂಟಿ. ಅವನ ಪ್ರಶ್ನೆಗಳಿಗೆ ಉತ್ತರ ಹೇಳಲು ಮನೆಮಂದಿಯೆಲ್ಲ ತಡವರಿಸುತ್ತಾರೆ. ಮೊನ್ನೆಯೂ ಹಾಗೇ ಅವನ ಪ್ರಶ್ನಾವಳಿ ದೇವರ ಬಗ್ಗೆ ತಿರುಗಿತ್ತು.

'ಅಮ್ಮಾ ಅಮ್ಮಾ ದೇವರು ಅಂದ್ರೆ ಅನಿಮಲ್ಸ್ ಅಲ್ವಾ?' ಎಂದ.

ಅವರಮ್ಮ ಆಶ್ಚರ್ಯದಿಂದ, 'ಯಾಕೋ ಪುಟ್ಟಾ?' ಎಂದು ಕೇಳಿದಳು.

'ಮತ್ತೆ, ನಮ್ಮನೆ ಪೂಜಾ ರೂಂನಲ್ಲಿರೋ ದೇವರ ಫೋಟೊಗಳಲ್ಲಿ, ಗಣಪ ಅಂದ್ರೆ ಎಲಿಫಂಟ್, ಹನುಮಂತ ಅಂದ್ರೆ ಮಂಕಿ ಮತ್ತೆ ಉಗ್ರ ನರಸಿಂಹ ಅಂದ್ರೆ ಲಯನ್ ಇದೆಯಲ್ಲಮ್ಮಾ, ಹಾಗಿದ್ರೆ ದೇವರು ಅಂದ್ರೆ ಅನಿಮಲ್ಸ್ ತಾನೆ?' ಅಂದಾಗ ಅವರಮ್ಮನಿಗೆ ಸುಸ್ತೋ ಸುಸ್ತು.

**ನಳಿನಿ ಟಿ. ಭೀಮಪ್ಪ**

## ಸ್ವರ್ಗ ಸೇರದ ನಾರು

ನಮ್ಮ ಮನೆಯಲ್ಲಿ ಬಿಡುವ ಮಲ್ಲಿಗೆ ಹೂವುಗಳನ್ನು ದಾರದಲ್ಲಿ ಕಟ್ಟಿ ಹಾರ ಮಾಡಿ ದೇವರ ಫೋಟೊಗಳಿಗೆ ಹಾಕುತ್ತೇನೆ. ಒಮ್ಮೆ ಹಿಂದಿನ ದಿನ ದೇವರಿಗೆ ಹಾಕಿದ್ದ ಹೂವಿನ ಹಾರಗಳನ್ನೆಲ್ಲಾ ತೆಗೆದು ಹಾಕುತ್ತಿದ್ದಾಗ ಹೂವನ್ನು ಕಟ್ಟಲು ಉಪಯೋಗಿಸಿದ ದಾರ ಚೆನ್ನಾಗಿಯೇ ಇರುವುದನ್ನು ಗಮನಿಸಿದೆ. ಸರಿ, ಹೂವನ್ನೆಲ್ಲ ತರಿದು ಹಾಕಿ ದಾರವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. ಪಕ್ಕದಲ್ಲಿ ನಿಂತು ನೋಡುತ್ತಿದ್ದ ನಮ್ಮ ಮನೆಯವರು, 'ಏನು ಮಾಡ್ತಾ ಇದೀಯಾ?' ಎಂದು ಕೇಳಿದರು. ವಿಷಯವನ್ನು ಅವರಿಗೆ ಹೇಳಿದೆ. ಅದಕ್ಕವರು ನಗುತ್ತಾ, 'ಹೂವಿನ ಜತೆ ನಾರೂ ಸ್ವರ್ಗ ಸೇರುತ್ತೆ ಅನ್ನೋ ಗಾದೆ ಮಾತಿದೆ. ಪಾಪ ನೀನು ನಾರಿಗೆ ಸ್ವರ್ಗ ತಪ್ಪಿಸುತ್ತಿದ್ದೀಯಲ್ಲಾ!' ಎಂದರು. ನನಗೂ ತಡೆಯಲಾರದಷ್ಟು ನಗು ಬಂತು.

**ಬಿ.ಎಸ್. ರಾಜಲಕ್ಷ್ಮಿ**



ಚಿತ್ರಗಳು: ಗಣೇಶ ಆಚಾರ್ಯ